OS No.359/2021
Pw1

ದಿನಾಂಕ 09.06.2026 ರಂದು ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದಃ</u>**

ನಾನು ಆಶಾಕಾರ್ಯಕರ್ತೆ ಆಗಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಹಾಗೂ ಬರೆಯಲು ಬರುತ್ತದೆ. ಏನು ಪರಿಹಾರ ಕೊರಿ ದಾವಾ ಹೂಡಿರುತ್ತೀರಿ ಎಂದರೆ ದಾವಾ ಸ್ವತ್ತು ನನಗೆ ಸೇರಬೇಕು ಎಂದು ಹೂಡಿರುತ್ತೇನೆ ಎಂದು ನುಡಿದಿರುತ್ತೇನೆ. ಈ ದಾವೆಯನ್ನು ಯಾರ ವಿರುದ್ದ ಹೂಡಿರುತ್ತೀರಿ ಎಂದರೆ ಶಫಿ ಹಾಗೂ ಮೊಹುದ್ದೀನ್ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತು ಈಗ ಖಾಲೀ ನಿವೇಶನ ಆಗಿರುತ್ತದೆ. ಯಾವ ದಿನಾಂಕ ದಾವಾ ಸ್ವತ್ತಿನ ಬಳಿ ಗಲಾಟೆ ಆಗಿರುತ್ತದೆ ಎಂದರೆ ನೆನಪಿಲ್ಲ ಎಂದು ನುಡಿದಿರುತ್ತಾರೆ. ಸದರಿ ಗಲಾಟೆ ಸಂಬಂದ ಪೋಲಿಸರಿಗೆ ದೂರನ್ನು ನೀಡಿರುತ್ತೀರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನಲ್ಲಿ ಇದ್ದ ಹಳೆ ಮನೆಯನ್ನು ಯಾವಾಗ ಕೆಡವಿರುತ್ತೀರಿ ಎಂದರೆ 2021 ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನಲ್ಲಿ ಮನೆ ಕಟ್ಟಲು ಪಂಚಾಯಿತಿಯಿಂದ ಪರವಾನಗೆ ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ವಾದ ಪತ್ರದ ಒಕ್ಕಣೆಗಳು ಗೊತ್ತಿದೆಯಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಗಿದೆ)

ಓ ಹೇ ಕೇ ಸ ಇದೆ

**1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.**